# ಎರಡನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ
# ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು

ಸ್ಪೆಷಲ್ ಕೇಸ್ ನಂ: 59/2010

(ಪ್ರಾಸಾ-18 ಚಾಸಾ-31 )

ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು

ದಿ: 06.09.2022.

| | | |
|---|---|---|
| ಸಾಕ್ಷಿದಾರರ ಹೆಸರು | - | ಗುರುಮೂರ್ತಿ, |
| ತಂದೆಯ ಹೆಸರು | - | ವೆಂಕಟರಾಯಪ್ಪ, |
| ವಯಸ್ಸು | - | 59 ವರ್ಷ, |
| ಉದ್ಯೋಗ | - | ವ್ಯವಸಾಯ, |
| ವಾಸ | - | ಬಾಗೇಪಲ್ಲಿ. |

**ಮುಖ್ಯ ವಿಚಾರಣೆ: ಮಾನ್ಯ ವಿಶೇಷ ಸರ್ಕಾರಿ ಅಭಿಯೋಕರವರಿಂದ:**

ಮೃತ ದೊಡ್ಡಚಿನ್ನಪ್ಪ ಇವರ ಮಗಳು ನನ್ನ ಹೆಂಡತಿ. ಪ್ರಾಸಾ-17 ನನ್ನ ಮಗ. ಈಗ ಸುಮಾರು 12 ವರ್ಷಗಳ ಹಿಂದೆ ಶಿವರಾತ್ರಿ ಹಬ್ಬಕ್ಕೆ ಬರುವಂತೆ ಹೇಳಿದ್ದರಿಂದ ನಾನು ದ್ಯಾವರಹಳ್ಳಿಯ ಮಾವನಾದ ದೊಡ್ಡಚಿನ್ನಪ್ಪನ ಮನೆಗೆ ಹೋಗಿದ್ದೆ. ಶಿವರಾತ್ರಿ ಹಬ್ಬದ ದಿನ ಬೆಳಗ್ಗೆ 6 ಘಂಟೆಗೆ ಎದ್ದು ತೋಟದ ಕಡೆ ಹೋಗಿ ಸುತ್ತಾಡಿಕೊಂಡು ಸುಮಾರು ಬೆಳಗ್ಗೆ 09.00-09.30 ರ ಅವಧಿಯಲ್ಲಿ ವಾಪಸ್ಸು ಮನೆ ಕಡೆ ಬಂದೆ. ಮನೆಯ ಮುಂದೆ ಅರಳಿಕಟ್ಟೆ ಇದೆ. ಅರಳಿಕಟ್ಟೆಯ ಹತ್ತಿರ ಕುಳಿತಿದ್ದ ಶಾಮಣ್ಣ ಮತ್ತು ವೆಂಕಟಪ್ಪ ಇವರೊಂದಿಗೆ ಮಾತನಾಡುತ್ತಿದ್ದೆ. ಆ ವೇಳೆಗೆ ಗಾಯಿತ್ರಮ್ಮ, ದೊಡ್ಡಚಿನ್ನಪ್ಪ, ದೇವರಾಜು, ಮುನಿರಾಜು, ಮುನಿಕೃಷ್ಣಪ್ಪ ಮತ್ತು ನಾರಾಯಣಸ್ವಾಮಿ (ಪ್ರಾಸಾ-4) ಇವರೆಲ್ಲರೂ ನಾರಾಯಣಸ್ವಾಮಿ (ಪ್ರಾಸಾ-4) ಇವರ ಮನೆಯ ಮುಂದೆ ಮಾತನಾಡುತ್ತಾ ನಿಂತಿದ್ದರು. ಆಗ ಎರಡು ಕಾರು ಮತ್ತು ನಾಲ್ಕು ಬೈಕ್ ಗಳಲ್ಲಿ ಸುಮಾರು 18 ಜನ ಅಲ್ಲಿಗೆ ಬಂದರು. ಆ ರೀತಿ ಬಂದವರಲ್ಲಿ ಮಂಜುನಾಥ ಎಂಬುವವರು ಒಮ್ಮೆಲೆ ಪ್ರಾಸಾ-4 ಅವರ ಹತ್ತಿರ ಹೋಗಿ ಆತನ ಕಪಾಳಕ್ಕೆ ಹೊಡೆದು ವಡ್ಡನಾ ನನ್ನ ಮಗನ್ನ ಎಳ್ಕೊಳ್ರೋ ನಮ್ಮ ಒಕ್ಕಲಿಗರವರ ಮೇಲೆ ಬರುತ್ತಾನೆ ಎಂದ. ಈಗ ಬಹಳ ವರ್ಷವಾದ್ದರಿಂದ ಆರೋಪಿತರಲ್ಲಿ ಸದರಿ ಮಂಜುನಾಥ ಯಾರು ಎಂದು ಗುರುತಿಸಲು ಆಗುವುದಿಲ್ಲ. ಆಗ ಮೃತ ದೊಡ್ಡಚಿನ್ನಪ್ಪ, ಮೃತ ಗಾಯಿತ್ರಮ್ಮ ಮತ್ತು ಮೃತ

ದೇವರಾಜ ಇವರು ಪ್ರಾಸಾ-4 ಇವರನ್ನು ಮನೆಯ ಒಳಗೆ ಹಾಕಿ ಬಾಗಿಲು ಹಾಕಿ ಚಿಲಕ ಹಾಕಿದರು. ಗಾಯಿತ್ರಮ್ಮ ಅಡ್ಡ ಬಂದಿದ್ದರಿಂದ ತಿಮ್ಮಯ್ಯ ಎಂಬುವವನು ಚಾಕುವಿನಿಂದ ಗಾಯಿತ್ರಮ್ಮಗೆ ಹೊಟ್ಟೆಗೆ ಚುಚ್ಚಿದ. ನ್ಯಾಯಾಲಯದ ಮುಂದಿರುವ ಆರೋಪಿಗಳಲ್ಲಿ ಸಾಕ್ಷಿದಾರರು 1ನೇ ಆರೋಪಿ ತಿಮ್ಮಪ್ಪನನ್ನು ತಿಮ್ಮಯ್ಯ ಎಂದು ಗುರ್ತಿಸುತ್ತಾರೆ.

2. ದೊಡ್ಡಚಿನ್ನಪ್ಪನಿಗೂ ಸಹ ಚಾಕುವಿನಿಂದ ಬಂದವರು ಚುಚ್ಚಿದರು. ಅವರು ಕೈಗಳಲ್ಲಿ ದೊಣ್ಣೆ, ಚಾಕು ಹಿಡಿದುಕೊಂಡು ಬಂದಿದ್ದರು. ಅವರು ಬಹಳಷ್ಟು ಜನ ಇದ್ದುದರಿಂದ ಮತ್ತು ನಾನು ಆಗ ಸುಮಾರು 10-15 ಅಡಿ ದೂರ ನಿಂತಿದ್ದರಿಂದ ಮತ್ತು ಬಂದವರು ಒಟ್ಟಿಗೆ ಹಲ್ಲೆ ಮಾಡಿದ್ದರಿಂದ ಚಿನ್ನಪ್ಪನಿಗೆ ಯಾರು ಚುಚ್ಚಿದರು ಎಂದು ಸರಿಯಾಗಿ ಕಾಣಲಿಲ್ಲ. ದೇವರಾಜನಿಗೆ ಆತನ ಬೀಜಕ್ಕೆ ಯಾರೋ ಒದ್ದರು. ಆತ ಸಹ ಬಿದ್ದುಬಿಟ್ಟ. ದೇವರಾಜನಿಗೆ ಆರೋಪಿತರಲ್ಲಿ ಯಾರು ಆ ರೀತಿ ಒದ್ದಿದ್ದಾರೆಂದು ನನಗೆ ಗುರ್ತಿಸಲು ಈಗ ಆಗುವುದಿಲ್ಲ. ಒಬ್ಬೊಬ್ಬರೇ ಬಿದ್ದಿದ್ದರಿಂದ ನನಗೆ ಗಾಬರಿಯಾಗಿ ಉಸಿರಾಡದಂತೆ ಆಗಿ ಏನೂ ಕಾಣದಂತೆ ಆಯಿತು. ನಾನು ಗಾಬರಿಯಾಗಿ ಮನೆ ಕಡೆಗೆ ಓಡಿ ಹೋದೆ. ಮನೆಯಲ್ಲಿ ನೀರು ಕುಡಿದು ಅಲ್ಲೇ ಸ್ವಲ್ಪ ಹೊತ್ತು ಇದೆ. ಹೊರಗೆ ಬರುವಂತೆ ನನಗೆ ಆಗಲಿಲ್ಲ. ಸ್ವಲ್ಪ ಸಮಯ ಬಿಟ್ಟು ಬಂದಾಗ ಕಾರಿನಲ್ಲಿ ನಲ್ಲಿ ಮೃತರನ್ನು ಮತ್ತು ಗಾಯಾಳುಗಳನ್ನು ಹಾಕಿಕೊಂಡು ಹೋದರು. ಯಾರು ಹಾಕಿದ್ದಾರೆಂದು ನಾನು ನೋಡಲಿಲ್ಲ.

3. ನಾನು ಮನೆಯ ಹತ್ತಿರವೇ ಉಳಿದೆ. ಮಧ್ಯಾಹ್ನ 03.00 ಘಂಟೆಗೆ ಮೂರು ಜನ ತೀರಿಕೊಂಡಿದ್ದಾಗಿ ಮಾಹಿತಿ ಬಂತು. ಗಲಾಟೆಯಲ್ಲಿ ಪ್ರಾಸಾ-1, 2 ಇವರಿಗೂ ಏಟುಗಳಾಗಿವೆ. ಜಮೀನು ಕಡೆಯಿಂದ ಬಂದ ಪ್ರಾಸಾ-3 ಇವರಿಗೂ ಸಹ ಗಲಾಟೆಯಲ್ಲಿ ಏಟು ಆಗಿವೆ. ಅವರಿಗೆ ಯಾರು ಹೊಡೆದಿದ್ದಾರೆಂದು ನಿಖರವಾಗಿ ಹೇಳಲು ಆಗುವುದಿಲ್ಲ. ಹಲ್ಲೆ ಮಾಡಲು ಉಪಯೋಗಿಸಿದ ಚಾಕುಗಳನ್ನು ನೋಡಿದರೆ ಗುರುತಿಸಲು ಆಗುವುದಿಲ್ಲ.

4. ಮೂರು ಜನ ತೀರಿಕೊಂಡ ವಿಷಯ ಗೊತ್ತಾದ ಮೇಲೆ ನಾನು ದೇವನಹಳ್ಳಿ ಆಸ್ಪತ್ರೆಗೆ ಹೋದೆ. ಅಲ್ಲಿಗೆ ಹೋದಾಗ ಸಂಜೆ 04.30 ಆಗಿತ್ತು. ಪೋಲಿಸರು ಮೃತ ಗಾಯಿತ್ರಮ್ಮನ ಶವ ಮಹಜರ್ ಗೆ ಸಾಕ್ಷಿಯಾಗುವಂತೆ ನನ್ನನ್ನು ಕರೆದರು. ಆಗ ನನ್ನೊಂದಿಗೆ ಚಾಸಾ-29 ಮತ್ತು 30 ಇವರು ಸಹ ಸಾಕ್ಷಿದಾರರಾಗಿದ್ದರು. ಮೃತಳ ಹೊಟ್ಟೆಯ ಮೇಲೆ ಚಾಕುವಿನಿಂದ ಚುಚ್ಚಿದ ಗಾಯ ಆಗಿತ್ತು. ಮಹಜರ್ ಅನ್ನು ಸಂಜೆ 05.00 ಘಂಟೆಯಿಂದ 08.00 ಘಂಟೆ ಅವಧಿಯಲ್ಲಿ ಶವಗಾರದಲ್ಲಿ ಮಾಡಿದರು. ಈಗ ತೋರಿಸಲಾದ ದಾಖಲೆ ಸದರಿ ಶವ ಪಂಚನಾಮೆ ಇದೆ. ಅದನ್ನು ನಿಪಿ-26 ಎಂದು ಮತ್ತು ಅದರಲ್ಲಿರುವ ಅವರ ಸಹಿಯನ್ನು ನಿಪಿ-26(ಎ) ಎಂದು ಗುರ್ತಿಸಲಾಯಿತು.

5. ಮರುದಿನ ಬೆಳಗ್ಗೆ 7 ಘಂಟೆಗೆ ಸ್ಥಳ ಮಹಜರ್ ಮಾಡಲು ಪೋಲಿಸರು ಸ್ಥಳಕ್ಕೆ ಬಂದರು. ಪ್ರಾಸಾ-5 ಮುನಿಯಪ್ಪ ಪೋಲಿಸರಿಗೆ ಸ್ಥಳವನ್ನು ತೋರಿಸಿದರು. ಪ್ರಾಸಾ-4 ನಾರಾಯಣಸ್ವಾಮಿ ಇವರ ಮನೆಯಿಂದ ಸುಮಾರು 5-6 ಅಡಿ ದೂರದಲ್ಲಿ ರಕ್ತ ಹತ್ತಿದ ಮಣ್ಣು ಮತ್ತು ಸಾದಾ ಮಣ್ಣನ್ನು ಪೋಲಿಸರು ತೆಗೆದುಕೊಂಡರು. ಅಲ್ಲಿಂದ ಸ್ವಲ್ಪ ದೂರದಲ್ಲಿ ಇನ್ನೊಂದು ಕಡೆ ರಕ್ತ ಹತ್ತಿದ ಮಣ್ಣು ಮತ್ತು ಸಾದಾ ಮಣ್ಣನ್ನು ಪೋಲಿಸರು ತೆಗೆದುಕೊಂಡರು. ಅಲ್ಲೇ ಒಂದು ಮೋಟಾರ್ ಬೈಕ್ ಇತ್ತು. ಅದನ್ನು ಪೋಲಿಸರು ತೆಗೆದುಕೊಂಡರು. ಅದರ ನಂಬರ್ ಗೊತ್ತಿಲ್ಲ. ಅಲ್ಲಿ ಪೋಲಿಸರಿಗೆ ಆಗ ಮಹಜರ್ ಬರೆದು ನನ್ನ ಸಹಿ ತೆಗೆದುಕೊಂಡರು. ಈಗ ತೋರಿಸಲಾದ ದಾಖಲೆ ಸದರಿ ಸ್ಥಳ ಮಹಜರ್ ಇದೆ. ಅದನ್ನು ಈಗಾಗಲೇ ನಿಪಿ-5 ಎಂದು ಗುರ್ತಿಸಲಾಗಿದ್ದು ಅದರಲ್ಲಿರುವ ಅವರ ಸಹಿಯನ್ನು ನಿಪಿ-5(ಬಿ) ಎಂದು ಗುರ್ತಿಸಲಾಯಿತು. ಮು.ಮಾ-27 ರಿಂದ 30 ಇವುಗಳನ್ನು ನೋಡಿ ಅವುಗಳು ಸ್ಥಳದಲ್ಲಿ ಸಂಗ್ರಹಿಸಿದ ಮಣ್ಣುಗಳು ಇರುತ್ತವೆ ಎಂದು ಗುರುತಿಸುತ್ತಾರೆ. ಮು.ಮಾ-30 ರ ಮೇಲಿನ ಸಹಿ ಚೀಟಿಯಲ್ಲಿನ ತಮ್ಮ ಸಹಿಯನ್ನು ಸಾಕ್ಷಿದಾರರು ಗುರ್ತಿಸಿದ್ದು ಅದನ್ನು ಮು.ಮಾ-30(ಬಿ) ಎಂದು ಗುರ್ತಿಸಲಾಯಿತು. (ಉಳಿದ ಮು.ಮಾ.ಗಳ ಮೇಲೆ ಸಹಿ ಚೀಟಿಗಳು ಹರಿದಿರುತ್ತವೆ).

6. ನಿಪಿ-21 ಎಂದು ಗುರ್ತಿಸಿದ ಛಾಯಚಿತ್ರಗಳಲ್ಲಿನ ಮೋಟಾರ್ ಸೈಕಲ್ ಕೆಎ-50-ಹೆಚ್-5374 ಅನ್ನು ಸಾಕ್ಷಿದಾರರಿಗೆ ತೋರಿಸಿದಾಗ ಸದರಿ ಮೋಟಾರ್ ಸೈಕಲ್ ಅನ್ನು ಗುರ್ತಿಸಲು ಆಗುವುದಿಲ್ಲ ಎನ್ನುತ್ತಾರೆ.

**ಪಾಟೀ ಸವಾಲುಃ 5 ಮತ್ತು 6 ನೇ ಆರೋಪಿತರ ಪರ ಶ್ರೀ ಎಸ್ ಎಸ್ ವಕೀಲರಿಂದಃ**

7. ನನ್ನ ಮದುವೆಯಾಗಿ ಸುಮಾರು ನಲವತ್ತು ವರ್ಷ ಆಗಿದೆ. ದ್ಯಾವರಹಳ್ಳಿಯಲ್ಲಿ ನಮ್ಮ ಕುಲಸ್ಥರೇ ಹೆಚ್ಚಾಗಿದ್ದಾರೆ ಎಂದರೆ ಸರಿ. ಆ ಊರಿನ ಕುಲಸ್ಥರ ಪರಿಚಯ ನಿಮಗೆ ಚೆನ್ನಾಗಿ ಇದೆ ಎಂದರೆ ಸಾಕ್ಷಿದಾರರು ಬಹಳ ಪರಿಚಯ ಇಲ್ಲ, ಯಾವಗಾಲಾದರೂ ಆ ಊರಿಗೆ ಹೋದರೆ ಬೆಳಗ್ಗೆ ಇದ್ದು ರಾತ್ರಿ ವಾಪಸ್ಸು ಬರುತ್ತೇನೆ. ಬಹಳ ಎಂದರೆ ಒಂದು ದಿವಸ ಇರುತ್ತಿದ್ದೆ ಎನ್ನುತ್ತಾರೆ. ವಾಹನಗಳಲ್ಲಿ ಜನರು ಬಂದರು ಎಂದು ಹೇಳಿದ ಜನರಲ್ಲಿ ದ್ಯಾವರಹಳ್ಳಿಯವರು ಯಾರೂ ಇರಲಿಲ್ಲ ಎಂದರೆ ಸಾಕ್ಷಿದಾರರು ನನಗೆ ಜ್ಞಾಪಕವಿಲ್ಲ ಎನ್ನುತ್ತಾರೆ. ನ್ಯಾಯಾಲಯದ ಮುಂದಿರುವ ಆರೋಪಿತರು ದ್ಯಾವರಹಳ್ಳಿ ಗ್ರಾಮದವರು ಯಾರ್ಯಾರು ಎಂದು ಗುರ್ತಿಸಲು ಆಗುವುದಿಲ್ಲ.

8. ನನ್ನ ಮಾವ ದೊಡ್ಡಚಿನ್ನಪ್ಪನ ಮನೆಯಿಂದ ಪ್ರಾಸಾ-4 ಇವರ ಮನೆ ಸುಮಾರು 50 ಅಡಿ ದೂರದಲ್ಲಿದೆ. ಶಿವರಾತ್ರಿಯ ಹಬ್ಬದ ಹಿಂದಿನ ದಿನ ಸಾಯಾಂಕಲ ನನ್ನ ಮಾವನ ಮನೆಗೆ ನಾನು ಮತ್ತು ನನ್ನ ಹೆಂಡತಿ ಬಂದಿದ್ದೆವು.

9. ಮಹಜರ್ ಮಾಡಲು ಪೋಲಿಸರು ಸ್ಥಳಕ್ಕೆ ಬಂದಾಗ ನನಗೆ ಪ್ರಕರಣದ ಮಾಹಿತಿ ಇತ್ತು. ಶವ ಮಹಜರ್ ಸಮಯದಲ್ಲಿ ನನಗೆ ಘಟನೆಯ ಬಗ್ಗೆ ಮಾಹಿತಿ ಇತ್ತು. ಶವ ಮಹಜರ್ ಮಾಡುವಾಗ ಅಲ್ಲಿದ್ದ ಪೋಲಿಸ್ ಅಧಿಕಾರಿಯ ಹೆಸರು ಹೇಳಲು ಆಗುವುದಿಲ್ಲ. ಆಸ್ಪತ್ರೆಯಲ್ಲಿ ಎಷ್ಟು ಸಮಯದವರೆಗೆ ಇದ್ದೆ ಎಂದು ಈಗ ಹೇಳಲು ಆಗುವುದಿಲ್ಲ. ಅಲ್ಲಿ ನಮ್ಮ ಊರಿನವರು ಮತ್ತು ಬೇರೆ ಊರಿನವರು ಸೇರಿ ಸುಮಾರು 10-15 ಜನ ಇದ್ದರು. ಮೃತ ದೊಡ್ಡಚಿನ್ನಪ್ಪನ ಸಂಬಂಧಿಕ ಎಂದು ನನ್ನನ್ನು ಪೋಲಿಸರು ಮಹಜರ್ ಗೆ ಕರೆದರು. ಮೃತ ಗಾಯಿತ್ರಮ್ಮ

ಸಂಬಂಧದಿಂದ ನನಗೆ ತಂಗಿಯಾಗಬೇಕು. ಶವ ಮಹಜರ್ ಮಾಡುವಾಗ ಗಾಯಿತ್ರಮ್ಮ ಹೇಗೆ ಸತ್ತಿದ್ದಾಳೆಂದು ಪೋಲಿಸರು ನನಗೆ ಕೇಳಿಲ್ಲ. ಗಾಯಿತ್ರಮ್ಮನಿಗೆ ಯಾರು ಹೊಡೆದಿದ್ದಾರೆ ಎಂದು ಪೋಲಿಸರಿಗೆ ಆಗ ಹೇಳಲು ನನಗೆ ತೊಂದರೆ ಇರಲಿಲ್ಲ.

10. ನಿಪಿ-5 ಸ್ಥಳ ಮಹಜರ್ ಮಾಡಿದ ಸ್ಥಳದ ಚೆಕ್ಕುಬಂದಿ ಹೇಳಲು ಬರುವುದಿಲ್ಲ. ಸ್ಥಳ ಮಹಜರ್ ಗೆ ಬಂದಾಗ ಪೋಲಿಸರು ಘಟನೆಯ ಬಗ್ಗೆ ನನಗೆ ಕೇಳಲಿಲ್ಲ. ಸಂಸ್ಕಾರ ಎಲ್ಲಾ ಮಾಡಬೇಕಾದ್ದರಿಂದ ಸುಮಾರು ಹದಿನೈದು ದಿವಸ ದ್ಯಾವರಹಳ್ಳಿಯಲ್ಲಿಯೇ ಇದ್ದೆ. ಸ್ಥಳ ಮಹಜರ್ ಮಾಡಿದ ಮರುದಿನ ಸಹ ಪೋಲಿಸರು ಊರಿಗೆ ಬಂದಿದ್ದರು. ಆಗಲೂ ಸಹ ಪೋಲಿಸರು ನನ್ನನ್ನು ವಿಚಾರಿಸಿಲ್ಲ. ನಾನು ಅವರನ್ನು ಮತ್ತು ಅವರು ನನ್ನನ್ನು ಆಗ ನೋಡಿದರು. ಮೃತರ ತಿಥಿ ಕಾರ್ಯವನ್ನು 12 ದಿವಸ ಆದ ಮೇಲೆ ಮಾಡಿದೆವು. ಆ ಹನ್ನೆರಡು ದಿನಗಳ ಅವಧಿಯಲ್ಲಿ ಪೋಲಿಸರು ದ್ಯಾವರಹಳ್ಳಿಗೆ ಬಂದು ಹೋಗಿದ್ದಾರೆ. ಆ ರೀತಿ ಪೋಲಿಸರು ಬಂದಾಗ ಅವರಿಗೆ ನಾನು ಘಟನೆಯ ಬಗ್ಗೆ ನಾನಾಗೀಯೇ ಹೇಳಿಲ್ಲ. ಅವರು ಕೇಳಿದಾಗ ಹೇಳೋಣ ಎಂದು ಸುಮ್ಮನಿದ್ದೆ.

11. ಹದಿನೈದು ದಿವಸ ಊರಿನಲ್ಲಿ ಇದ್ದೆ ಎಂಬ ವಿಚಾರವನ್ನು ಪೋಲಿಸರಿಗೆ ಹೇಳಿದ್ದೇನೆ. ನನ್ನ ಮಗ ಮತ್ತು ಹೆಂಡತಿಗೆ ನಾನು ದ್ಯಾವರಹಳ್ಳಿಯಲ್ಲಿಯೇ 15 ದಿವಸ ಇದ್ದುದ್ದು ಗೊತ್ತಿತ್ತು. ನನ್ನ ಮಗ ಪ್ರಾಸಾ-17 ಪಿಯುಸಿವರೆಗೆ ಬೆಣ್ಣೆಪರ್ತಿ ಊರಲ್ಲಿಯೇ ಇದ್ದು ವಿದ್ಯಾಭ್ಯಾಸ ಮಾಡಿದ್ದ ನಂತರ ದ್ಯಾವರಹಳ್ಳಿಯಲ್ಲಿ ಆತ ಇದ್ದು ವಿದ್ಯಾಭ್ಯಾಸ ಮಾಡಿದ್ದಾರೆ. ಘಟನೆಯಾದಾಗ ಪ್ರಾಸಾ-17 ದ್ಯಾವರಹಳ್ಳಿಯಲ್ಲಿಯೇ ಇದ್ದುಕೊಂಡು ದೇವನಹಳ್ಳಿಗೆ ಹೋಗಿ ಬಂದು ವಿದ್ಯಾಭ್ಯಾಸ ಮಾಡುತ್ತಿದ್ದರು.

12. ಪ್ರಾಸಾ-4 ಇವರ ಮನೆಯಿಂದ 4-5 ಅಡಿ ದೂರದಲ್ಲಿ ರಕ್ತ ಬಿದ್ದಿತ್ತು. ಅಲ್ಲಿಂದ 4-5 ಅಡಿ ದೂರದಲ್ಲಿ ಇನ್ನೊಂದು ಕಡೆ ರಕ್ತ ಬಿದ್ದಿತ್ತು. ನಿಪಿ-5 ರಲ್ಲಿ ರಕ್ತ ಎಷ್ಟೆಷ್ಟು ದೂರದಲ್ಲಿ ಬಿದ್ದಿತ್ತು ಎಂದು ಬರೆದ ಬಗ್ಗೆ ನನಗೆ ಗೊತ್ತಿಲ್ಲ. ನಿಪಿ-5 ಕ್ಕೆ ಸಹಿ ಮಾಡಿದ ತಾರೀಖು ನೆನಪಿಲ್ಲ. ಮಣ್ಣು ಸಂಗ್ರಹಿಸಿದ ಪ್ಲಾಸ್ಟಿಕ್ ಡಬ್ಬಗಳ ಮೇಲೆ ನನ್ನ ಸಹಿ ಚೀಟಿ ಇಲ್ಲ ಎಂದರೆ ಸರಿ. ಮು.ಮಾ-27 ರಿಂದ 30 ಇವುಗಳ ಮೇಲಿನ ಚೀಟಿಗಳಲ್ಲಿ ದಿನಾಂಕ ಇಲ್ಲ ಎಂದರೆ ಸರಿ.

13. ನಮ್ಮ ಊರಿಂದ ದ್ಯಾವರಹಳ್ಳಿಗೆ ಹೋಗಬೇಕಾದರೆ ವಿಶ್ವನಾಥಪುರ ಪೋಲಿಸ್ ಠಾಣೆಯ ಮುಂಭಾಗದಿಂದಲೇ ಹೋಗಬೇಕು. ಘಟನೆಯಾದ 9 ದಿವಸಕ್ಕೆ ವಿಶ್ವನಾಥಪುರ ಪೋಲಿಸ್ ಠಾಣೆಯವರು ನನ್ನನ್ನು ಠಾಣೆಗೆ ಕರೆಸಿದ್ದರು. ನಿಪಿ-5 ಕ್ಕೆ ಠಾಣೆಯಲ್ಲಿ ಸಹಿ ಮಾಡಿದ್ದೇನೆ ಎಂದರೆ ಸರಿಯಲ್ಲ. ಪ್ರಾಸಾ-4 ಇವರ ಮನೆಯ ಮುಂದೆ ನಿಪಿ-5 ರಂತೆ ಮಹಜರ್ ಮಾಡಿಲ್ಲ ಎಂದರೆ ಸರಿಯಲ್ಲ. ದೊಡ್ಡಚಿನ್ನಪ್ಪನ ಶವಮಹಜರ್ ಗೆ ಸಾಕ್ಷಿಯಾಗುವಂತೆ ಪೋಲಿಸರು ನನ್ನನ್ನು ಕೇಳಲಿಲ್ಲ. ನಿಪಿ-5 ಮಹಜರ್ ಅನ್ನು ಸುಮಾರು ಅರ್ಧ ಘಂಟೆ ಸಮಯವದರೆಗೆ ಮಾಡಿದ್ದಾರೆ. ಮೃತರು ನನ್ನ ಸಂಬಂಧಿಕರಾದ್ದರಿಂದ ಪ್ರಕರಣಕ್ಕೆ ಅನುಕೂಲವಾಗುವಂತೆ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ 1 ಮತ್ತು 12 ನೇ ಆರೋಪಿತರ ಪರ ಶ್ರೀ ಎಂ ಆರ್ ಎನ್ ವಕೀಲರಿಂದಃ**

14. ನಮ್ಮ ಊರಿನಿಂದ ದ್ಯಾವರಹಳ್ಳಿ ಊರಿಗೆ ಬರಲು ಸುಮಾರು ಎರಡರಿಂದ ಮೂರು ತಾಸು ಬೇಕಾಗುತ್ತದೆ. ಶಿವರಾತ್ರಿಯ ಹಿಂದಿನ ದಿನ ಬಸ್ಸಿನಲ್ಲಿ ನಾನು ಮತ್ತು ನನ್ನ ಹೆಂಡತಿ ದೇವನಹಳ್ಳಿಯವರೆಗೆ ಬಂದಿದ್ದೇವೆ. ಆ ರೀತಿ ಬಂದ ಬಸ್ ಟಿಕೇಟ್ ಅನ್ನು ನಾನು ಪೋಲಿಸರಿಗೆ ನೀಡಿಲ್ಲ.

15. ಪೋಲಿಸರು ಸ್ಥಳ ಮಹಜರ್ ಪೂರ್ತಿ ಮಾಡುವವರೆಗೆ ನಾನು ಸ್ಥಳದಲ್ಲಿಯೇ ಇದ್ದೆ. ನಿಪಿ-5 ನ್ನು ಪೋಲಿಸರು ನನಗೆ ಓದಿ ಹೇಳಿಲ್ಲ. ನಾನು ನಿಪಿ-5 ನ್ನು ಓದಿಲ್ಲ.

ನನಗೆ ಓದಲು ಬರುವುದಿಲ್ಲ. (ನಿಪಿ-5 ನ್ನು ನೀವು ಓದಿಲ್ಲ ಮತ್ತು ಪೋಲಿಸರು ನಿಮಗೆ ಓದಿ ಹೇಳಿಲ್ಲ ಆದ್ದರಿಂದ ಅದರಲ್ಲಿ ಏನು ಬರೆದಿದೆ ಎಂದು ನಿಮಗೆ ಗೊತ್ತಿಲ್ಲ ಎಂಬ ಪ್ರಶ್ನೆಯನ್ನು ಸಾಕ್ಷಿದಾರರಿಗೆ ಕೇಳಿರುತ್ತಾರೆ. ಸಾಕ್ಷಿದಾರರು ಹೌದು ಎನ್ನುತ್ತಾರೆ. ನ್ಯಾಯಾಲಯದ ಅಭಿಪ್ರಾಯದಲ್ಲಿ ಸದರಿ ಪ್ರಶ್ನೆ ವೇಗ್ ಇರುತ್ತದೆ. ಮಹಜರ್ ನಲ್ಲಿನ ಯಾವುದಾದಾರೂ ಸಂಗತಿಯನ್ನು ಕಾಂಟ್ರಡಿಕ್ಟ್ ಮಾಡಬೇಕಾಗಿದ್ದರೆ ಸದರಿ ಸಂಗತಿಯನ್ನು ನಿರ್ದಿಷ್ಟವಾಗಿ ಸಾಕ್ಷಿಯ ಗಮನಕ್ಕೆ ತರಬೇಕಾಗುತ್ತದೆ ಎಂದು ತಿಳಿಸಲಾಯಿತು.) ಘಟನಾ ಸ್ಥಳದಲ್ಲಿ ಸುಮಾರು 8-10 ಕಡೆ ರಕ್ತ ಬಿದ್ದಿತ್ತೇ ಎಂದರೆ ಸಾಕ್ಷಿದಾರರು ಎರಡೇ ಕಡೆ ಬಿದ್ದಿತ್ತು ಎನ್ನುತ್ತಾರೆ.

16. ಮೃತ ಗಾಯಿತ್ರಮ್ಮ ಅಡ್ಡ ಬಂದಿದ್ದರಿಂದ ತಿಮ್ಮಯ್ಯ ಎಂಬುವವನು ಚಾಕುವಿನಿಂದ ಗಾಯಿತ್ರಮ್ಮಗೆ ಹೊಟ್ಟೆಗೆ ಚುಚ್ಚಿದ ಎಂಬ ವಿಷಯವನ್ನು ನಾನು ಪೋಲಿಸರಿಗೆ ನೀಡಿದ ಹೇಳಿಕೆಯಲ್ಲಿ ಹೇಳಿಲ್ಲ ಎಂದರೆ ಸರಿಯಲ್ಲ. 1 ನೇ ಆರೋಪಿ ತಿಮ್ಮಯ್ಯ ಯಾವ ಊರಿನವರು ಎಂದು ನನಗೆ ಗೊತ್ತಿಲ್ಲ. ನಂತರ ಸಾಕ್ಷಿದಾರರು ಯಾರೋ ಆತ ಪಂಡಿತಪುರದವರು ಎಂದು ನನಗೆ ಹೇಳಿದರು ಎಂದು ಹೇಳುತ್ತಾರೆ. ಆ ರೀತಿ ಹೇಳಿದ ವ್ಯಕ್ತಿ ಯಾರೆಂದು ನನಗೆ ಗೊತ್ತಿಲ್ಲ. ಪಂಡಿತಪುರದ ಜನರು ನನಗೆ ಪರಿಚಯ ಇಲ್ಲ. 1 ನೇ ಆರೋಪಿಯ ಚಹರೆಯ ವಿವರವನ್ನು ನಾನು ಪೋಲಿಸರಿಗೆ ಹೇಳಿಲ್ಲ. 1 ನೇ ಆರೋಪಿಯನ್ನು ನ್ಯಾಯಾಲಯದಲ್ಲಿಯೇ ಮೊದಲ ಬಾರಿಗೆ ನೋಡಿದ್ದೇನೆ ಎಂದರೆ ಸರಿಯಲ್ಲ. ಘಟನೆಯ ವಿಷಯವನ್ನು ಪೋಲಿಸರಿಗೆ ಹೇಳಿದ್ದೇನೆ, ಬೇರೆಯವರಿಗೆ ಹೇಳಿಲ್ಲ. 1 ನೇ ಆರೋಪಿ ಘಟನೆಗೂ ಎರಡು ದಿನ ಮೊದಲಿನಿಂದ ಪೀಸ್ ಆಸ್ಪತ್ರೆಯಲ್ಲಿ ಒಳರೋಗಿಯಾಗಿ ದಾಖಲಾಗಿದ್ದರು ಎಂದರೆ ಗೊತ್ತಿಲ್ಲ. ಸಾಕ್ಷಿದಾರರು ಘಟನೆಯ ದಿನ ಆತ ಬಂದಿದ್ದ ಆದ್ದರಿಂದ ಆತ ಬಂದಿದ್ದಾಗಿ ಹೇಳುತ್ತಿದ್ದೇನೆ ಎನ್ನುತ್ತಾರೆ. ನಿಪಿ-5 ಮತ್ತು 26 ಇವುಗಳಿಗೆ ಠಾಣೆಯಲ್ಲಿ ಸಹಿ ಮಾಡಿದ್ದೇನೆ ಎಂದರೆ ಸರಿಯಲ್ಲ. 1 ನೇ ಆರೋಪಿಯನ್ನು ಇವತ್ತು ಬೆಳಗ್ಗೆ ಪೋಲಿಸರು ನನಗೆ ತೋರಿಸಿ ಆತನೇ ತಿಮ್ಮಯ್ಯ ಎಂದು ತಿಳಿಸಿದ್ದಾರೆ ಎಂದರೆ ಸರಿಯಲ್ಲ. ಮಂಜುನಾಥ ಎಂಬ ಆರೋಪಿ ಪ್ರಾಸಾ-4 ಇವರಿಗೆ ಕಪಾಳಕ್ಕೆ ಹೊಡೆದರು ಎಂದು ಸುಳ್ಳು

ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ 3, 7, 11, 13 ಮತ್ತು 14 ನೇ ಆರೋಪಿತರ ಪರ ಶ್ರೀ ಕೆಜೆಜಿ ವಕೀಲರಿಂದಃ**

17. ನನಗೆ ತುಂಬಾ ಹತ್ತಿರದವರಿಗೆ ತೊಂದರೆಯಾದರೆ ನಾನು ಸಹಾಯ ಮಾಡುತ್ತೇನೆ ಎಂದರೆ ಸರಿ. ಮೃತರನ್ನು ಮತ್ತು ಗಾಯಾಳುಗಳನ್ನು ಆಸ್ಪತ್ರೆಗೆ ಕಳುಹಿಸಲು ನಾನು ಸಹಾಯ ಮಾಡಿಲ್ಲ ಎಂದರೆ ಸರಿ. ಎರಡು ಕಾರು ಮತ್ತು ನಾಲ್ಕು ಮೋಟಾರ್ ಸೈಕಲ್ ಗಳಲ್ಲಿ 18 ಜನರು ಘಟನಾ ಸ್ಥಳಕ್ಕೆ ಬಂದರು ಎಂದು ಪೋಲಿಸರ ಮುಂದೆ ಹೇಳಿಲ್ಲ ಎಂದರೆ ಸರಿಯಲ್ಲ. ಬಂದವರಲ್ಲಿ ಒಬ್ಬ ಪ್ರಾಸಾ-4 ಇವರಿಗೆ ವಡ್ಡ ನನ್ನಮಗ ಎಂದು ಬೈದ ಎಂಬ ವಿಷಯವನ್ನು ನಾನು ಪೋಲಿಸರಿಗೆ ಹೇಳಿಲ್ಲ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ 17 ನೇ ಆರೋಪಿ ಪರ ಶ್ರೀ ಕೆವಿಕೆ ವಕೀಲರಿಂದಃ**

18. ಘಟನೆಯ ಹಿಂದಿನ ದಿನ ದೊಡ್ಡಚಿನ್ನಪ್ಪ ಇವರ ಮನೆಗೆ ಬಂದಿದ್ದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮೃತರು ತೀರಿಕೊಂಡ ವಿಷಯ ಕೇಳಿ ನಾನು ಆಸ್ಪತ್ರೆಗೆ ಬಂದಿದ್ದೇನೆ ಎಂದರೆ ಸರಿಯಲ್ಲ. ಘಟನೆಯ ಬಗ್ಗೆ ನನಗೆ ಏನೂ ಗೊತ್ತಿರದೇ ಇರುವ ಕಾರಣ ನಾನು ಶವ ಮಹಜರ್ ಸಮಯದಲ್ಲಿ ಪೋಲಿಸರಿಗೆ ಹೇಳಿಕೆ ನೀಡಿಲ್ಲ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ** ಉಳಿದ ಆರೋಪಿತರ ಪರ ವಕೀಲರು ಮೇಲಿನ ಪಾಟೀ ಸವಾಲನ್ನೇ ಅಳವಡಿಸಿಕೊಳ್ಳುವುದಾಗಿ ತಿಳಿಸುತ್ತಾರೆ.

ಮರುವಿಚಾರಣೆಃಇಲ್ಲ.

(ಸಾಕ್ಷಿ ಹೇಳಿದಂತೆ ಹೇಳಿಕೆಯನ್ನು ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಿ ಓದಿ ಹೇಳಿದ್ದು ಸಾಕ್ಷಿ ಸರಿ ಇರುವುದಾಗಿ ಒಪ್ಪಿರುತ್ತಾರೆ ಎಂದು ದೃಡೀಕರಿಸುತ್ತೇನೆ)

ಓ ಹೇ ಸಾ ಸ ಸಹಿ ಮಾಡಿದ್ದಾರೆ,

(ವಿ. ಎಂ. ಆನಂದಶೆಟ್ಟಿ)
ಎರಡನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು

(4, 15, 16, 18 ಮತ್ತು 19ನೇ ಆರೋಪಿ ಪರ ವಕೀಲರು ತಾವು ಕೆಲವೊಂದು ಪ್ರಶ್ನೆಗಳು ಕೇಳುವುದಿದೆ ಎಂದು ವಿನಂತಿ ಮಾಡಿದ ಮೇರೆಗೆ ಸಾಕ್ಷಿಯ ಮುಂದುವರಿದ ವಿಚಾರಣೆ)

**ಸಾಕ್ಷಿಯನ್ನು ಮಧ್ಯಾಹ್ನ ಪುನಃ ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.**

**ಪಾಟೀ ಸವಾಲುಃ 4, 15, 16, 18 ಮತ್ತು 19ನೇ ಆರೋಪಿತರ ಪರ ಶ್ರೀ ಟಿಎಸ್ ವಕೀಲರಿಂದಃ**

19. ಗಲಾಟೆಯಲ್ಲಿ 6ನೇ ಆರೋಪಿ ಶಾಂತಕುಮಾರ್, 15ನೇ ಆರೋಪಿ ವೆಂಕಟಪ್ಪ, 16ನೇ ಆರೋಪಿ ನಾರಾಯಣಸ್ವಾಮಿ, 19ನೇ ಆರೋಪಿ ಮುನಿರಾಜು, 18ನೇ ಆರೋಪಿ ನಾರಾಯಣಸ್ವಾಮಿ, 17ನೇ ಆರೋಪಿ ವೆಂಕಟೇಶ ಇರಲಿಲ್ಲ ಎಂದರೆ ಸಾಕ್ಷಿದಾರರು ನನಗೆ ಜ್ಞಾಪಕ ಇಲ್ಲ ಎನ್ನುತ್ತಾರೆ. ಈಗ ಹೇಳಿದ ಸದರಿ ಆರೋಪಿಗಳನ್ನು ನ್ಯಾಯಾಲಯದಲ್ಲಿ ಗುರುತಿಸಲು ಆಗುವುದಿಲ್ಲ.

ಮರುವಿಚಾರಣೆಃಇಲ್ಲ.

(ಸಾಕ್ಷಿ ಹೇಳಿದಂತೆ ಹೇಳಿಕೆಯನ್ನು ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಿ ಓದಿ ಹೇಳಿದ್ದು ಸಾಕ್ಷಿ ಸರಿ ಇರುವುದಾಗಿ ಒಪ್ಪಿರುತ್ತಾರೆ ಎಂದು ದೃಡೀಕರಿಸುತ್ತೇನೆ)

ಓ ಹೇ ಸಾ ಸ ಸಹಿ ಮಾಡಿದ್ದಾರೆ,

(ವಿ. ಎಂ. ಆನಂದಶೆಟ್ಟಿ)
ಎರಡನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು